# ಲಘು ಉದ್ಯೋಗ ಭಾರತಿ – ಕರ್ನಾಟಕ
# LAGHU UDYOG BHARATI - KARNATAKA

लघु उद्योग भारती

## 25ನೇ ವರ್ಷದ ವಾರ್ಷಿಕ ವರದಿ 2025-26

ಲಘು ಉದ್ಯೋಗ ಭಾರತಿ – ಕರ್ನಾಟಕ (ಎಲ್.ಯು.ಬಿ–ಕೆ), ಲಘು ಉದ್ಯೋಗ ಭಾರತಿ ಸಂಘಟನೆಯ ರಾಜ್ಯ ಘಟಕವಾಗಿದ್ದು, ಕರ್ನಾಟಕದ 29 ಜಿಲ್ಲೆಗಳಲ್ಲಿ ಅಸ್ತಿತ್ವ ಹೊಂದಿದೆ ಹಾಗೂ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ವಲಯಗಳ ಉದ್ಯಮಿಗಳ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುತ್ತಿದೆ. ಭವಿಷ್ಯದಲ್ಲಿ ಕರ್ನಾಟಕದ ಎಲ್ಲಾ 31 ಜಿಲ್ಲೆಗಳಿಗೂ ವಿಸ್ತರಿಸುವ ಗುರಿಯನ್ನು ಹೊಂದಿದೆ. 2026ರ ಜೂನ್ ವೇಳೆಗೆ ಎಲ್.ಯು.ಬಿ–ಕೆಯಲ್ಲಿ 2500ಕ್ಕೂ ಹೆಚ್ಚು ಸದಸ್ಯರಿದ್ದು, ಈ ಪೈಕಿ 550ಕ್ಕೂ ಹೆಚ್ಚು ಸದಸ್ಯರು ಮಹಿಳಾ ಉದ್ಯಮಿಗಳಾಗಿದ್ದಾರೆ.

## ನಮ್ಮ ಗುರಿ

- ಎಲ್.ಯು.ಬಿ–ಕೆ, ಎಂ.ಎಸ್.ಎಂ.ಇ ಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸೌಲಭ್ಯಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ. ಎಂ.ಎಂ.ಎಸ್.ಇ ಗಳು ಪರಸ್ಪರ ಸಂವಾದ ನಡೆಸಲು, ಒಬ್ಬರಿಗೊಬ್ಬರು ಸಹಾಯ ಮಾಡಲು ಮತ್ತು ಅವುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ವೇದಿಕೆಯನ್ನು ಒದಗಿಸುತ್ತದೆ. ಈ ಮೂಲಕ ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಪಾತ್ರವಹಿಸಲು ಅವರನ್ನು ಉತ್ತೇಜಿಸುತ್ತದೆ.
- ಎಂ.ಎಸ್.ಎಂ.ಇ ವಲಯವು ಕಡಿಮೆ ಹೂಡಿಕೆ ಮತ್ತು ಗ್ರಾಮೀಣ / ಅರೆ–ನಗರ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯದಂತಹ ವಿಶಿಷ್ಟ ಅನುಕೂಲಗಳನ್ನು ಹೊಂದಿದೆ.
- ಎಲ್.ಯು.ಬಿ, ಎಂ.ಎಸ್.ಎಂ.ಇ ಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತದೆ ಹಾಗೂ ಉದ್ಯಮಿಗಳು, ಆಡಳಿತ ಮಂಡಳಿ, ಸಿಬ್ಬಂದಿ, ಗ್ರಾಹಕರು, ಪೂರೈಕೆದಾರರು, ಹೂಡಿಕೆದಾರರು ಮತ್ತು ಎಲ್ಲಾ ಸರ್ಕಾರಿ ಇಲಾಖೆಗಳ ನಡುವೆ ಸೌಹಾರ್ದಯುತ ಮತ್ತು ಸ್ನೇಹಪರ ಬಾಂಧವ್ಯವನ್ನು ಕಾಪಾಡಿಕೊಳ್ಳಲು ಸದಸ್ಯರನ್ನು ಪ್ರೇರೇಪಿಸುತ್ತದೆ.

## ದೃಷ್ಟಿಕೋನ

ತನ್ನ ಸದಸ್ಯರಿಗೆ ಬೆಂಬಲ ನೀಡುವ ಮೂಲಕ ಹಾಗೂ ನಾವು ಮಾಡುವ ಪ್ರತಿಯೊಂದು ಕೆಲಸದಲ್ಲೂ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಮೂಲಕ ವ್ಯಾಪಾರ ಬೆಳವಣಿಗೆಯನ್ನು ಹೆಚ್ಚಿಸಲು ಕರ್ನಾಟಕದ ಪ್ರಮುಖ ಎಂ.ಎಸ್.ಎಂ.ಇ ಸಂಸ್ಥೆಯಾಗಿ ಹೊರಹೊಮ್ಮುವುದು.

## ಧ್ಯೇಯ

- ಎಂ.ಎಸ್.ಎಂ.ಇ ಗಳಿಗೆ ಬೆಂಬಲ ಮತ್ತು ಮಾರ್ಗದರ್ಶನ ನೀಡುವುದು.
- ಸರ್ಕಾರದೊಂದಿಗಿನ ಸಂವಾದಗಳು, ನೀತಿ ನಿರೂಪಣೆ ಸಹಕಾರ ಮತ್ತು ಬೌದ್ಧಿಕ ನಾಯಕತ್ವದ ಮೂಲಕ ಎಂ.ಎಸ್.ಎಂ.ಇ ಪಾಲುದಾರರ ಅಗತ್ಯಗಳನ್ನು ಪೂರೈಸುವುದು.
- ಸರ್ಕಾರ ಮತ್ತು ಉದ್ಯಮಗಳ (ಸಾರ್ವಜನಿಕ ಮತ್ತು ಖಾಸಗಿ) ನಡುವೆ ಸಂಪರ್ಕ ಜಾಲದ ಅವಕಾಶಗಳನ್ನು ಚುರುಕುಗೊಳಿಸುವುದು.
- ಆಮದು ಪರ್ಯಾಯ ಉತ್ಪನ್ನಗಳನ್ನು ಪ್ರೋತ್ಸಾಹಿಸುವುದು.
- ಜಾಗತಿಕ ಕಾರ್ಯತಂತ್ರಗಳು ಮತ್ತು ಸಾಮರ್ಥ್ಯವರ್ಧನೆಗೆ ಸಹಯೋಗ ನೀಡುವುದು ಹಾಗೂ ನೆರವಾಗುವುದು.
- ಯುವಜನರಲ್ಲಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವುದು.
- ಶಿಕ್ಷಣ ಮತ್ತು ನಾವೀನ್ಯತೆಯ ಮೂಲಕ ಜ್ಞಾನ ಪಾಲುದಾರಿಕೆ ಮತ್ತು ಕೌಶಲಾಭಿವೃದ್ಧಿ.
- ಅತ್ಯುತ್ತಮ ಕಾರ್ಯಗಳನ್ನು ಇತರರೂ ಅಳವಡಿಸಿಕೊಳ್ಳಲು ಕೈಗಾರಿಕಾ ಭೇಟಿಗಳನ್ನು ಆಯೋಜಿಸುವುದು.
- ಮಹಿಳಾ ಉದ್ಯಮಶೀಲತೆ ಮತ್ತು ನಾಯಕತ್ವವನ್ನು ಉತ್ತೇಜಿಸುವುದು.

# ಪ್ರವೇಶ ಮತ್ತು ಬೆಳವಣಿಗೆ : ರಫ್ತು ಮಾರುಕಟ್ಟೆ ಮತ್ತು ಅಂತಾರಾಷ್ಟ್ರೀಯ ಮಾರಾಟ ಕಾರ್ಯಗಾರ

**ಲಘು ಉದ್ಯೋಗ ಭಾರತಿ ಹಾಗೂ ಐ.ಎಂ.ಎಸ್ ಫೌಂಡೇಷನ್ ವತಿಯಿಂದ ರಫ್ತು ಮಾರುಕಟ್ಟೆ ಕುರಿತ ತರಬೇತಿ ಬ್ಯಾಚ್**

**ಜುಲೈ 5, 2025, ಬೆಂಗಳೂರು**



ಲಘು ಉದ್ಯೋಗ ಭಾರತಿ–ಕರ್ನಾಟಕ (ಎಲ್.ಯು.ಬಿ–ಕೆ) ಹಾಗೂ ಐ.ಎಂ.ಎಸ್ ಫೌಂಡೇಷನ್ (ಐ.ಎಂ.ಎಸ್.ಎಫ್) ವತಿಯಿಂದ ಗ್ಲೋಬಲ್ ನೆಟ್ವರ್ಕ್ ಇನ್ಸ್ಟಿಟ್ಯೂಟ್ (ಜಿ.ಎನ್.ಐ) ಸಹಭಾಗಿತ್ವದಲ್ಲಿ ಪ್ರವೇಶ ಮತ್ತು ಬೆಳವಣಿಗೆ : ರಫ್ತು ಮಾರುಕಟ್ಟೆ ಮತ್ತು ಅಂತಾರಾಷ್ಟ್ರೀಯ ಮಾರಾಟ ಕಾರ್ಯಗಾರ ಆಯೋಜಿಸಲಾಗಿತ್ತು. ನಾಲ್ಕು ದಿನದ ಈ ಕಾರ್ಯಗಾರದಲ್ಲಿ ಉತ್ಪಾದನೆ, ಇಂಜಿನಿಯರಿಂಗ್, ಔಷಧ, ಎಲೆಕ್ಟ್ರಾನಿಕ್ಸ್, ಆಹಾರ ಸಂಸ್ಕರಣೆ ಹಾಗೂ ಸೇವಾ ಕ್ಷೇತ್ರಗಳ 21 ಪ್ರಮುಖರು ಭಾಗವಹಿಸಿದರು.

**ಫಲಶ್ರುತಿ :** ಐ.ಎಂ.ಎಸ್. ಫೌಂಡೇಷನ್ (ಐ.ಎಂ.ಎಸ್.ಎಫ್) ಹಾಗೂ ಲಘು ಉದ್ಯೋಗ ಭಾರತಿ– ಕರ್ನಾಟಕ (ಎಲ್.ಯು.ಬಿ–ಕೆ) ವತಿಯಿಂದ ರಫ್ತು ಮಾರುಕಟ್ಟೆ ಮತ್ತು ಅಂತರಾಷ್ಟ್ರೀಯ ಮಾರಾಟ ಕುರಿತು ಮೂರು ತಂಡದಲ್ಲಿ ಕಾರ್ಯಗಾರ ಪೂರ್ಣಗೊಳಿಸಿದ್ದು, ಬೆಂಗಳೂರು ಹಾಗೂ ಕರ್ನಾಟಕದ ಎರಡನೇ ಹಂತದ ನಗರಗಳಿಂದಲೂ ಸೇರಿದಂತೆ 75 ಉದ್ಯಮಿಗಳು ಇದರ ಲಾಭ ಪಡೆದಿದ್ದಾರೆ. ಒಂದೂವರೆ ವರ್ಷದಲ್ಲಿ 37 ಜನರು ರಫ್ತು ಕಾರ್ಯಚಟುವಟಿಕೆಗಳನ್ನು ಸಫಲಪೂರ್ವಕವಾಗಿ ಆರಂಭಿಸಿದ್ದಾರೆ.

# ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋ (ಐಎಂಎಸ್) 2025

## ವೈಮಾಂತರಿಕ್ಷ ಹಾಗೂ ರಕ್ಷಣೆ/ ಸಾಮಾನ್ಯ ಇಂಜಿನಿಯರಿಂಗ್ ಎಕ್ಸ್‌ಪೊ

**ನವೆಂಬರ್ 6–8–2025, ಬೆಂಗಳೂರು ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ (ಬಿ.ಐ.ಇ.ಸಿ), ಬೆಂಗಳೂರು.**

ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋ (ಐ.ಎಂ.ಎಸ್) ಏಳನೇ ಅವತರಣಿಕೆಯು ಭಾರತದ ಉತ್ಪಾದನಾ ಕ್ಷೇತ್ರದ ಪಯಣದಲ್ಲಿ ಮಹತ್ವದ ಮೈಲುಗಲ್ಲನ್ನು ನಿರ್ಮಿಸಿತು. ಲಘು ಉದ್ಯೋಗ ಭಾರತಿ–ಕರ್ನಾಟಕವು ಐ.ಎಂ.ಎಸ್ ಫೌಂಡೇಷನ್ ಸಹಯೋಗದಲ್ಲಿ ಆಯೋಜಿಸಿದ್ದ ಎಕ್ಸ್‌ಪೊಗೆ ಅಧಿಕೃತ ಕಾರ್ಯಕ್ರಮ ಮತ್ತು ಮಾರಾಟ ಪಾಲುದಾರನಾಗಿ ಇಂಡಿಯಾ ಎಕ್ಸ್‌ಪೊಸಿಷನ್ ಮಾರ್ಟ್ ಬೆಂಬಲ ನೀಡಿತ್ತು. ಮೂರು ದಿನದ ಎಕ್ಸ್‌ಪೊ 2025ರ ನವೆಂಬರ್ 6 ರಿಂದ 8 ರವರೆಗೆ ಬೆಂಗಳೂರಿನ, ಬೆಂಗಳೂರು ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ನಡೆಯಿತು.

ಬಿ.ಐ.ಇ.ಸಿ.ಯಲ್ಲಿ ಸುಮಾರು 6,000 ಚದರ ಮೀಟರ್ ವ್ಯಾಪ್ತಿಯಲ್ಲಿದ್ದ ಎರಡೂ ಪ್ರದರ್ಶನ ಸಭಾಂಗಣ ಸಂಪೂರ್ಣ ಮಾರಾಟವಾದವು.

### ಎಕ್ಸ್‌ಪೊದ ಪಕ್ಷಿನೋಟ

- 430ಕ್ಕೂ ಹೆಚ್ಚು ಪ್ರದರ್ಶಕರು (220 ಎಂ.ಎಸ್.ಎಂ.ಇ ಗಳೂ ಸೇರಿ)
- ಡಿ.ಪಿ.ಎಸ್.ಯು. ಗಳು, ಬೃಹತ್ ಉದ್ಯಮಗಳು, ಮಧ್ಯಮ ಉದ್ಯಮಗಳು ಹಾಗೂ ಎಂ.ಎಸ್.ಎಂ.ಇ ಗಳು ಪ್ರತಿನಿಧಿಸಿದ್ದವು.
- 33,784 ಉದ್ಯಮಿಗಳಿಂದ ಭೇಟಿ.
- 2,500ಕ್ಕೂ ಹೆಚ್ಚು ಪ್ರದರ್ಶಕ ಪ್ರತಿನಿಧಿಗಳು.
- 500ಕ್ಕೂ ಹೆಚ್ಚು ಸಮ್ಮೇಳನ ಅತಿಥಿಗಳು.
- 75ಕ್ಕೂ ಹೆಚ್ಚು ದೇಶೀಯ ಹಾಗೂ ಅಂತಾರಾಷ್ಟ್ರೀಯ ಭಾಷಣಕಾರರು.
- 200ಕ್ಕೂ ಹೆಚ್ಚು ವಿಐಪಿಗಳು ಮತ್ತು ವಿದೇಶಿ ಗಣ್ಯರು.
- 100ಕ್ಕೂ ಹೆಚ್ಚು ಮಾಧ್ಯಮ ಪ್ರತಿನಿಧಿಗಳು.
- 2000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ 150ಕ್ಕೂ ಹೆಚ್ಚು ಉದ್ಯಮಾಕಾಂಕ್ಷಿಗಳು.




ಪರಮ ಪೂಜನೀಯ **ಡಾ. ಮೋಹನ್ ಭಾಗವತ್.ಜಿ** ಅವರ ಭಾಗವಹಿಸುವಿಕೆ ಹಾಗೂ ನೆರೆದವರನ್ನುದ್ದೇಶಿಸಿ ಮಾತನಾಡಿ ಎಂ.ಎಸ್.ಎಂ.ಇ ಸಮೂಹಕ್ಕೆ ಮಾರ್ಗದರ್ಶನ ಮಾಡಿದ್ದು ಐ.ಎಂ.ಎಸ್. 2025ರ ಬಹುದೊಡ್ಡ ಸಫಲತೆ. ಅವರ ಮಾರ್ಗದರ್ಶನ ಹಾಗೂ ಒಳನೋಟಗಳು ಉದ್ಯಮಿಗಳು ಮತ್ತು ಉದ್ಯಮ ಮುಂದಾಳುಗಳನ್ನು ಹುರಿದುಂಬಿಸಿತು. ಅವರ ಭಾಗವಹಿಸುವಿಕೆಯು ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋನ ಅತ್ಯಂತ ಮಹತ್ವದ ಮೈಲುಗಲ್ಲಾಯಿತು.






**ಫಲಶ್ರುತಿ :** ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋ (ಐ.ಎಂ.ಎಸ್) 2025ಕ್ಕೆ ಪ್ರದರ್ಶಕರು, ಖರೀದಿದಾರರು, ಉದ್ಯಮ ಮುಖಂಡರು ಹಾಗೂ ಸರ್ಕಾರಿ ಸಂಸ್ಥೆಗಳಿಂದ ಅಭೂತಪೂರ್ವ ಸ್ಪಂದನೆ ದೊರಕಿತು. ಪ್ರದರ್ಶನವು ಅಸಂಖ್ಯ ಪ್ರಮಾಣದಲ್ಲಿ ಬಿ2ಬಿ ಮಾತುಕತೆಗಳಿಗೆ ವೇದಿಕೆ ಒದಗಿಸಿತು ಹಾಗೂ 500 ಕೋಟಿ ರೂ.ಗೂ ಹೆಚ್ಚಿನ ಮೌಲ್ಯದ ಉದ್ಯಮವನ್ನು ಸೃಷ್ಟಿಸಿತು. ಇದರಿಂದಾಗಿ ಕರ್ನಾಟಕದಾದ್ಯಂತ ಉತ್ಪಾದನಾ ಕ್ಷೇತ್ರದಲ್ಲಿರುವ ಎಂ.ಎಸ್.ಎಂ.ಇಗಳಿಗೆ ಗಣನೀಯ ಅವಕಾಶಗಳನ್ನು ಸೃಜಿಸಿತು.

## ಐ.ಎಂ.ಎಸ್ಕಾನ್ 2025– ಪರಿಣಾಮಕಾರಿ ವ್ಯೂಹಾತ್ಮಕ ಸಂವಾದ

ಎಕ್ಸ್‌ಪೊ ಜೊತೆಜೊತೆಗೇ ಐ.ಎಂ.ಎಸ್.ಕಾನ್‌ನ ಎರಡನೇ ಅವತರಣಿಕೆಯೂ ಜರುಗಿತು. 'ಭಾರತವನ್ನು ಸಬಲೀಕರಿಸುವತ್ತ ಜಾಗತಿಕ ಉತ್ಪಾದನೆಯ ಭವಿಷಯ' ಎಂಬ ವಿಷಯದಲ್ಲಿ ಎರಡು ದಿನ ನಡೆದ ಸಮ್ಮೇಳನದಲ್ಲಿ ನೀತಿ ನಿರೂಪಕರು, ವಿಜ್ಞಾನಿಗಳು, ಸಿ.ಇ.ಒ ಗಳು ಹಾಗೂ ಕ್ಷೇತ್ರ ತಜ್ಞರೂ ಸೇರಿ 70ಕ್ಕೂ ಹೆಚ್ಚು ಗಣ್ಯರು 11 ತಾಂತ್ರಿಕ ಅವಧಿಗಳನ್ನು ನಡೆಸಿಕೊಟ್ಟರು.

### ಅವಧಿಗಳ ಮುಖ್ಯ ವಿಷಯಗಳು

- ಜಾಗತಿಕ ಸರಬರಾಜು ಸರಪಳಿಯಲ್ಲಿ ಭಾರತದ ಪಾತ್ರ.
- ವೈಮಾಂತರಿಕ್ಷ ಹಾಗೂ ರಕ್ಷಣಾ ಸಂಶೋಧನೆ.
- ಸೂಕ್ಷ್ಮ ಭಾಗಗಳ ಸಿದ್ಧತೆ.
- ಡಿಜಿಟಲ್ ಉತ್ಪಾದನೆ ಹಾಗೂ ಕೈಗಾರಿಕೆ 4.0.
- ರಕ್ಷಣಾ ವಾಯು ಅರ್ಹತಾ ಪ್ರಮಾಣಪತ್ರ.
- ಎ.ಐ. ಹಾಗೂ ಭಾವಿ ಪೀಳಿಗೆಯ ತಂತ್ರಜ್ಞಾನಗಳು.
- ದೇಶೀಯ ನೀತಿಗಳು ಹಾಗೂ ಸುಧಾರಣೆಗಳು.
- ವೈಮಾಂತರಿಕ್ಷ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಹೂಡಿಕೆ.

ಅವಧಿಗಳು ಮೆಚ್ಚಿಸುವ ಮಾತುಗಳನ್ನೂ ಮೀರಿ ಅನುಸರಣೆ ಪ್ರಕ್ರಿಯೆಗೆ ಒತ್ತು ನೀಡಿದವು, ಪ್ರಾಯೋಗಿಕವಾಗಿದ್ದವು, ದೂರದರ್ಶಿತ್ವ ಹೊಂದಿದ್ದವು ಹಾಗೂ ಪರಿಹಾರ ಪೂರಕವಾಗಿದ್ದವು. ಬಿ2ಬಿ ಸಭೆಗಳು ಹಾಗೂ ಗ್ರಾಹಕರ ಅಭಿವೃದ್ಧಿ ಕಾರ್ಯಕ್ರಮಗಳು ಮೂಲ ಉಪಕರಣ ಉತ್ಪಾದಕರು (ಒ.ಇ.ಎಂ), ರಕ್ಷಣಾ ಕ್ಷೇತ್ರದ ಸಾರ್ವಜನಿಕ ಉದ್ದಿಮೆಗಳು (ಡಿ.ಪಿ.ಎಸ್.ಯು) ಹಾಗೂ ಎಂ.ಎಸ್.ಎಂ.ಇ ಗಳ ನಡುವೆ ವ್ಯವಸ್ಥಿತ ಸಂವಾದವನ್ನು ಏರ್ಪಡಿಸುವುದರ ಜೊತೆಗೆ ವಾಣಿಜ್ಯ ಮೌಲ್ಯವನ್ನೂ ಸೃಜಿಸಿತು.






**ಫಲಶ್ರುತಿ :** ಐ.ಎಂ.ಎಸ್.ಸ್ಕಾನ್ 2025 ಎರಡನೇ ಸಮ್ಮೇಳನವಾಗಿದ್ದು, ಪಾವತಿಸಿ ಭಾಗವಹಿಸುವಂತಹ ಮೊದಲ ಸಮ್ಮೇಳನವಾಗಿತ್ತು. ಅತಿಥಿಗಳು ಹಾಗೂ ಕೈಗಾರಿಕಾ ವೃತ್ತಿಪರರಿಂದ ಅಭೂತಪೂರ್ವ ಸ್ಪಂದನೆಯನ್ನು ಪಡೆಯಿತು. ಸಮ್ಮೇಳನದಲ್ಲಿ ಉನ್ನತ ಮಟ್ಟದ ತಾಂತ್ರಿಕ ಅವಧಿಗಳು, ವ್ಯೂಹಾತ್ಮಕ ಚರ್ಚೆಗಳು ಹಾಗೂ ಭಾಗವಹಿಸಿದವರಿಗೆ ಉತ್ಪಾದನೆಯಿಂದ ವೈಮಾಂತರಿಕ್ಷ ಮತ್ತು ರಕ್ಷಣಾ ಕ್ಷೇತ್ರದವರೆಗೆ ಮೌಲ್ಯಯುತ ಕೈಗಾರಿಕಾ ಒಳನೋಟಗಳು, ಪ್ರಾಯೋಗಿಕ ಜ್ಞಾನ, ಸಹಭಾಗಿತ್ವದ ಅವಕಾಶಗಳನ್ನು ಅರ್ಥಪೂರ್ಣ ಪರಿಚಯ ಸಂದರ್ಭಗಳು ಒದಗಿಸಿದವು.

## ಎಲ್.ಯು.ಬಿ–ಕೆ ಹುಬ್ಬಳ್ಳಿ ಘಟಕದ ಕಾರ್ಯಕ್ರಮಗಳು

### ಗಾಂಧಿ ಶಿಲ್ಪಿ ಬಜಾರ್ : ಹುಬ್ಬಳ್ಳಿ ಮೇಳ

ಭಾರತ ಸರ್ಕಾರದ ಜವಳಿ ಸಚಿವಾಲಯದ ಅಭಿವೃದ್ಧಿ ಆಯುಕ್ತರ (ಕರಕುಶಲ) ಸಕ್ರಿಯ ಬೆಂಬಲದೊಂದಿಗೆ ಲಘು ಉದ್ಯೋಗ ಭಾರತಿ ಮತ್ತು ಐ.ಎಂ.ಎಸ್. ಫೌಂಡೇಷನ್, ಜುಲೈ 17, 2025 ರಿಂದ ಒಂದು ವಾರದ ಗಾಂಧಿ ಶಿಲ್ಪಿ ಮೇಳವನ್ನು ಅತ್ಯಂತ ಯಶಸ್ವಿಯಾಗಿ ಆಯೋಜಿಸಿದವು.

ಭಾರತದ ಸಾಂಪ್ರದಾಯಿಕ ಕರಕುಶಲತೆಯನ್ನು ಉತ್ತೇಜಿಸಲು ಹಾಗೂ ಗ್ರಾಮೀಣ ಕುಶಲಕರ್ಮಿಗಳನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಗಾಂಧಿ ಶಿಲ್ಪಿ ಬಜಾರ್ ಹೆಸರಿನ **'ಗ್ರಾಮ ಶಿಲ್ಪಿ 2.0'** ಎಂಬ ರಾಷ್ಟ್ರೀಯ ಮಟ್ಟದ ಕರಕುಶಲ ವಸ್ತುಪ್ರದರ್ಶನವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾರತದ 10 ರಾಜ್ಯಗಳಿಂದ ಸುಮಾರು 50 ಕುಶಲಕರ್ಮಿಗಳು ಭಾಗವಹಿಸಿದ್ದು, ವಿವಿಧ ವಿಭಾಗಗಳ ಕರಕುಶಲ ಉತ್ಪನ್ನಗಳನ್ನು ಪ್ರದರ್ಶಿಸಿದರು.






**ಫಲಶ್ರುತಿ :** ಗಾಂಧಿ ಶಿಲ್ಪಿ ಬಜಾರ್ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ ಕುಶಲಕರ್ಮಿಗಳಿಗೆ ಗಣನೀಯ ಪ್ರಮಾಣದ ವ್ಯಾಪಾರವನ್ನು ಸೃಷ್ಟಿಸಿದ್ದು, ಅವರಿಗೆ ನೇರ ಮಾರುಕಟ್ಟೆ ಪ್ರವೇಶ ಹಾಗೂ ಮಾರಾಟ ಹೆಚ್ಚಳವನ್ನು ಕಲ್ಪಿಸಿತು. ಈ ಕಾರ್ಯಕ್ರಮವು ಕುಶಲಕರ್ಮಿಗಳಿಗೆ ಶಾಶ್ವತ ಗ್ರಾಹಕ ಸಂಬಂಧಗಳು ಹಾಗೂ ಖರೀದಿದಾರರ ಜಾಲಗಳನ್ನು ಸ್ಥಾಪಿಸಲು ಸಹಕಾರಿಯಾಯಿತು. ಇದರ ಪರಿಣಾಮವಾಗಿ ಮೇಳದ ನಂತರವೂ ಅವರಿಗೆ ನಿರಂತರ ವ್ಯಾಪಾರ ಅವಕಾಶಗಳು ಮತ್ತು ಮರು ಖರೀದಿಗಳು ಲಭಿಸಿ, ಅವರ ದೀರ್ಘಕಾಲೀನ ಜೀವನೋಪಾಯವು ಬಲಗೊಂಡಿತು.

## ಡಿಸೈನ್ ಟೆಕ್ನಾಲಜಿ ಡೆವಲಪ್‌ಮೆಂಟ್ : ಕಸೂತಿ ಕಾರ್ಯಾಗಾರ<br>ಸೆಪ್ಟೆಂಬರ್ 1 ರಿಂದ 30, 2025, ಧಾರವಾಡ

ಕರಕುಶಲ ಇಲಾಖೆಯ ಅಭಿವೃದ್ಧಿ ಆಯುಕ್ತರು ಆಯೋಜಿಸಿದ್ದ ಒಂದು ತಿಂಗಳ ತರಬೇತಿ ಅವಧಿಯಲ್ಲಿ ಧಾರವಾಡ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ 30 ಮಹಿಳಾ ಕುಶಲಕರ್ಮಿಗಳಿಗಾಗಿ ವಿನ್ಯಾಸ ಹಾಗೂ ತಂತ್ರಜ್ಞಾನ ಅಭಿವೃದ್ಧಿ ಕಾರ್ಯಾಗಾರವನ್ನು ಐ.ಎಂ.ಎಸ್ ಫೌಂಡೇಷನ್ ಯಶಸ್ವಿಯಾಗಿ ಆಯೋಜಿಸಿತು.

ಈ ಕಾರ್ಯಾಗಾರವು ಭಾಗವಹಿಸಿದ ಎಲ್ಲ 30 ಕುಶಲಕರ್ಮಿಗಳ ವಿನ್ಯಾಸ ಸಾಮರ್ಥ್ಯ, ಉತ್ಪನ್ನ ಅಭಿವೃದ್ಧಿ ಕೌಶಲ ಹಾಗೂ ಮಾರುಕಟ್ಟೆ ಸಿದ್ಧತೆಯನ್ನು ಹೆಚ್ಚಿಸಿತು. ಇದು ಅವರಿಗೆ ಸುಧಾರಿತ ವಾಣಿಜ್ಯ ಸಾಮರ್ಥ್ಯದೊಂದಿಗೆ ಸಮಕಾಲೀನ ಕಸೂತಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಅನುವು ಮಾಡಿಕೊಟ್ಟಿತು.

**ಫಲಶ್ರುತಿ : 'ರಾಷ್ಟ್ರೀಯ ಶ್ರೇಷ್ಠ ಕುಶಲಕರ್ಮಿ'** ಪ್ರಶಸ್ತಿಗೆ ನಾಮ ನಿರ್ದೇಶನಗೊಂಡಿರುವ ಧಾರವಾಡದ ಅಮ್ಮಿನಭಾವಿಯ ಕಸೂತಿ ಕುಶಲಕರ್ಮಿ **ಶ್ರೀಮತಿ ದಿಲ್ಶಾದ್ ಬಿ ಅತ್ತಾರ** ಅವರನ್ನು ಗುರುತಿಸಿದ್ದು ಈ ಕಾರ್ಯಕ್ರಮದ ಪ್ರಮುಖ ಸಾಧನೆಯಾಯಿತು. ಇದು ಈ ಉಪಕ್ರಮದ ಮೂಲಕ ರೂಪಿಸಿದ ಕರಕುಶಲತೆಯ ಗುಣಮಟ್ಟ ಹಾಗೂ ಸಾಮರ್ಥ್ಯ ವರ್ಧನೆಯನ್ನು ಪ್ರತಿಬಿಂಬಿಸುತ್ತದೆ.





# 2ನೇ ವಾಲ್ವ್‌ಎಕ್ಸ್ 2026 – ಭಾರತದ ಫ್ಲೋ-ಕಂಟ್ರೋಲ್ ಉತ್ಪಾದನಾ ಕ್ಷೇತ್ರದ ಸಬಲೀಕರಣ, ಫೆಬ್ರವರಿ 18–21, ಹುಬ್ಬಳ್ಳಿ

ವಾಲ್ವ್‌ಎಕ್ಸ್ 2026ರ ಎರಡನೇ ಅವತರಣಿಕೆಯನ್ನು ಹುಬ್ಬಳ್ಳಿಯಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು. ಇದು ವಾಲ್ವ್‌ಗಳು, ಪಂಪ್‌ಗಳು ಹಾಗೂ ಆಕ್ಚುಯೇಟರ್‌ಗಳ ಉದ್ಯಮಕ್ಕೆ ಒಂದು ಕೇಂದ್ರೀಕೃತ ಮತ್ತು ಪ್ರಭಾವಶಾಲಿ ವೇದಿಕೆಯಾಗಿ ತನ್ನ ಸ್ಥಾನವನ್ನು ಮರುದೃಢಪಡಿಸಿತು.




2026ರ ಫೆಬ್ರವರಿ 18 ರಿಂದ 20ರವರೆಗೆ ನಡೆದ ಮೂರು ದಿನಗಳ ವಸ್ತುಪ್ರದರ್ಶನ ಸಹಿತ ಸಮ್ಮೇಳನವು ನಡೆಯಿತು. ಫ್ಲೋ-ಕಂಟ್ರೋಲ್ ಕ್ಷೇತ್ರದಲ್ಲಿ ಸಂವಾದ, ನಾವೀನ್ಯತೆ ಮತ್ತು ಸಹಭಾಗಿತ್ವವನ್ನು ಹೆಚ್ಚಿಸಲು 60ಕ್ಕೂ ಹೆಚ್ಚು ಪ್ರದರ್ಶಕರು, ಕ್ಷೇತ್ರ ತಜ್ಞರು, ನೀತಿ ನಿರೂಪಕರು ಹಾಗೂ ಉದ್ಯಮದ ಮುಖಂಡರನ್ನು ಒಂದೇ ಸೂರಿನಡಿ ಸೇರಿಸಿತು.

## ಎಲ್.ಯು.ಬಿ-ಕೆ ಬೆಂಗಳೂರು ಉತ್ತರ ಘಟಕವು ಆಯೋಜಿಸಿದ ಕಾರ್ಯಕ್ರಮಗಳು

# ನಮ್ಮ ಕಾರ್ಖಾನೆ 2025 : ಬಿ2ಬಿ ಮಾರುಕಟ್ಟೆ ಸಂಪರ್ಕಗಳನ್ನು ಉತ್ತೇಜಿಸುವ ಮತ್ತು ಎಂ.ಎಸ್.ಎಂ.ಇ. ಗಳ ಪೂರೈಕೆ ಸರಪಳಿಯನ್ನು ಬಲಪಡಿಸುವ ವಸ್ತುಪ್ರದರ್ಶನ, ಡಿಸೆಂಬರ್ 5–6, 2025–ಬೆಂಗಳೂರು

'ನಮ್ಮ ಕಾರ್ಖಾನೆ 2025' ಎಂ.ಎಸ್.ಎಂ.ಇ ವಲಯದ ವೈವಿಧ್ಯಮಯ ಹಾಗೂ ಬೆಳೆಯುತ್ತಿರುವ ಅಗತ್ಯಗಳನ್ನು ಪೂರೈಸಲು ರೂಪಿಸಲಾದ ಎರಡು ದಿನಗಳ ಬಿ2ಬಿ ಉತ್ಪಾದನಾ ಉದ್ಯಮದ ವಸ್ತುಪ್ರದರ್ಶನ. ಈ ಕಾರ್ಯಕ್ರಮವು ಸ್ಕ್ರೂಗಳು, ಫೇಸನರ್ಗಳು, ಸೂಕ್ಷ್ಮ ಬಿಡಿಭಾಗಗಳು, ಉಪಕರಣಗಳು, ಕಂಪ್ರೆಸರ್ಗಳು, ಯಂತ್ರೋಪಕರಣಗಳು, ಪರಿಕರಗಳು, ಕನ್ಸ್ಯೂಮೆಬಲ್ಸ್ ಮತ್ತು ಕಾರ್ಖಾನೆಯ ಇತರ ಅತ್ಯಗತ್ಯ ಅವಶ್ಯಕತೆಗಳು ಸೇರಿದಂತೆ ಎಂಜಿನಿಯರಿಂಗ್ ಬಿಡಿಭಾಗಗಳು ಹಾಗೂ ಕೈಗಾರಿಕಾ ಪರಿಹಾರಗಳ ಸಮಗ್ರ ಶ್ರೇಣಿಯನ್ನು ಪ್ರದರ್ಶಿಸಿತು. ಆ ಮೂಲಕ ಉದ್ಯಮಕ್ಕೆ ಅಗತ್ಯವಿರುವ ಎಲ್ಲವನ್ನೂ ಒಂದೇ ಸೂರಿನಡಿ ತಂದಿತು.







**ಫಲಶ್ರುತಿ:** ‘ನಮ್ಮ ಕಾರ್ಖಾನೆ 2025’ ಉದ್ಯಮದಿಂದ ಉದ್ಯಮಕ್ಕೆ (ಬಿ2ಬಿ) ಮಾತುಕತೆಗಳನ್ನು ಚುರುಕುಗೊಳಿಸಲು ರೂಪಿಸಲಾದ ವೇದಿಕೆ. ಇದರ ಅಡಿಯಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂ.ಎಸ್.ಎಂ.ಇ) ವೈವಿಧ್ಯಮಯ ವಿಭಾಗಗಳ 60ಕ್ಕೂ ಹೆಚ್ಚು ಪ್ರದರ್ಶಕರು, ಉದ್ಯಮದ ಮುಖಂಡರು, ಖರೀದಿದಾರರು ಮತ್ತು ಉತ್ಪಾದಕರನ್ನು ಒಟ್ಟುಗೂಡಿಸಿತು. ಈ ವಸ್ತುಪ್ರದರ್ಶನವು ಅಲ್ಪಾವಧಿಯ ವಹಿವಾಟುಗಳ ಜೊತೆಗೆ ದೀರ್ಘಕಾಲೀನ ವ್ಯಾಪಾರ ಪಾಲುದಾರಿಕೆಗಳಿಗೆ ವೇಗವರ್ಧಕವಾಗಿ ಕಾರ್ಯನಿರ್ವಹಿಸಿತು. ಆ ಮೂಲಕ ವ್ಯಾಪಾರವನ್ನು ಸಕ್ರಿಯಗೊಳಿಸುವ ಅತ್ಯಂತ ಪ್ರಭಾವಶಾಲಿ ವೇದಿಕೆಯಾಗಿ ತನ್ನ ಸ್ಥಾನವನ್ನು ಭದ್ರವಾಗಿ ಮರುದೃಢೀಕರಿಸಿತು.

## ಯುವ ದಿನ ಆಚರಣೆ




ಸ್ವಾಮಿ ವಿವೇಕಾನಂದ ಜಯಂತಿಯ ಅಂಗವಾಗಿ ಎಲ್.ಯು.ಬಿ–ಕೆ ಬೆಂಗಳೂರು ಉತ್ತರ ತಂಡವು ಯುವ ದಿವಸ ಹಾಗೂ ಮಾರಥಾನ್ ಆಯೋಜಿಸಿತ್ತು.

## ಎಲ್‌ಯುಬಿ–ಕೆ ಬೆಳಗಾವಿ ಘಟಕವು ಆಯೋಜಿಸಿದ ಕಾರ್ಯಕ್ರಮಗಳು

### ಎಂ.ಎಸ್.ಎಂ.ಇ ಇನ್ಕ್ಯುಬೇಶನ್ ಯೋಜನೆ ಕುರಿತ ಜಾಗೃತಿ ಕಾರ್ಯಾಗಾರ

ಇನ್ಕ್ಯುಬೇಶನ್ ಯೋಜನೆ ಕುರಿತ ಜಾಗೃತಿ ಕಾರ್ಯಾಗಾರವನ್ನು 2025ರ ಅಕ್ಟೋಬರ್ 9ರ ಗುರುವಾರ ಬೆಳಗಾವಿಯ ಮರಾಠಾ ಮಂಡಲ್ ಎಂಜಿನಿಯರಿಂಗ್ ಕಾಲೇಜಿನ (ಎಂ.ಎಂ.ಇ.ಸಿ) ರೋಬಿಯೋಟ್ ಎಂ.ಎಂ.ಇ.ಸಿ–ಟಿ.ಬಿ.ಐ 2.0 (ROBIOT MMEC-TBI 2.0) ಪರಿಸರದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು. ರ್‍ಯಾಂಪ್ (RAMP) ಯೋಜನೆಯಡಿ ಆಯೋಜಿಸಲಾದ ಈ ಕಾರ್ಯಕ್ರಮವು ಯುವ ಪ್ರತಿಭೆಗಳು, ವಿದ್ಯಾರ್ಥಿಗಳು ಮತ್ತು ಪ್ರಸ್ತುತ ಇರುವ ಎಂ.ಎಸ್.ಎಂ.ಇ. ಗಳಿಗೆ ಪೂರಕ ವ್ಯವಸ್ಥೆಗಳ ಬಗ್ಗೆ ಅರಿವು ಮೂಡಿಸುವ ಮೂಲಕ ನಾವೀನ್ಯತೆ ಹಾಗೂ ಉದ್ಯಮಶೀಲತೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿತ್ತು.

## ಕಾರ್ಯಕ್ರಮದ ಉದ್ದೇಶ ಮತ್ತು ವ್ಯಾಪ್ತಿ

ವಿದ್ಯಾರ್ಥಿಗಳು ಹಾಗೂ ಎಂ.ಎಸ್.ಎಂ.ಇ ಗಳಿಗೆ ಈ ಯೋಜನೆಯ ಮೂಲಕ ಲಭ್ಯವಿರುವ ಮಾರ್ಗದರ್ಶನ, ಸಂಪರ್ಕ ಜಾಲ ಮತ್ತು ಆರಂಭಿಕ ಬಂಡವಾಳ (ಸೀಡ್ ಕ್ಯಾಪಿಟಲ್) ನೆರವಿನ ಅವಕಾಶಗಳನ್ನು ತೋರಿಸಿಕೊಡುವುದು ಈ ಕಾರ್ಯಾಗಾರದ ಪ್ರಾಥಮಿಕ ಉದ್ದೇಶವಾಗಿತ್ತು.

ಈ ಕಾರ್ಯಕ್ರಮವು ಲಘು ಉದ್ಯೋಗ ಭಾರತಿ–ಕರ್ನಾಟಕ (ಬೆಳಗಾವಿ ಘಟಕ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಎಂ.ಎಸ್.ಎಂ.ಇ ನಿರ್ದೇಶನಾಲಯ, ಕೆ.ಸಿ.ಟಿ.ಯು., ಬೆಳಗಾವಿ ಜಿಲ್ಲಾ ಕೈಗಾರಿಕಾ ಕೇಂದ್ರ (ಡಿ.ಐ.ಸಿ) ಬೆಳಗಾವಿಯ ಮರಾಠಾ ಮಂಡಲ್ ಎಂಜಿನಿಯರಿಂಗ್ ಕಾಲೇಜುಗಳ ಸಹಯೋಗದ ಪ್ರಯತ್ನವಾಗಿತ್ತು.

## ಎಂ.ಎಸ್.ಎಂ.ಇ.ಗಳಿಗಾಗಿ ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ರಫ್ತು ಉತ್ತೇಜನಾ ಕಾರ್ಯಾಗಾರ ಆಯೋಜನೆ

16 ಅಕ್ಟೋಬರ್ 2025, ಗುರುವಾರದಂದು ಬೆಳಗಾವಿಯ ಅಥಣಿಯಲ್ಲಿ 'ರಫ್ತು ಉತ್ತೇಜನೆ ಮತ್ತು ಸೌಲಭ್ಯಗಳ ಕುರಿತ ಒಂದು ದಿನದ ಜಾಗೃತಿ ಕಾರ್ಯಾಗಾರ'ವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ರ್‍ಯಾಂಪ್ (RAMP) ಯೋಜನೆಯಡಿ ಹೋಟೆಲ್ ಆರ್ ಪ್ಯೂರ್ ವೆಜ್ ಬ್ಯಾಂಕ್ವೆಟ್ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಎಂ.ಎಸ್.ಎಂ.ಇ ನಿರ್ದೇಶನಾಲಯ, ಕೆ.ಸಿ.ಟಿ.ಯು., ಟೆಕ್ಸಾಕ್ (TECSOK) ಬೆಂಗಳೂರು, ಬೆಳಗಾವಿ ಜಿಲ್ಲಾ ಕೈಗಾರಿಕಾ ಕೇಂದ್ರ (ಡಿ.ಐ.ಸಿ),ಮತ್ತು ಲಘು ಉದ್ಯೋಗ ಭಾರತಿ–ಕರ್ನಾಟಕದ (ಬೆಳಗಾವಿ ಘಟಕ) ಸಹಯೋಗದಲ್ಲಿ ನಡೆಯಿತು.

ರಫ್ತು ಅವಕಾಶಗಳು ಹಾಗೂ ಲಭ್ಯವಿರುವ ಸರ್ಕಾರಿ ಯೋಜನೆಗಳ ಕುರಿತು ಎಂ.ಎಸ್.ಎಂ.ಇ ಗಳಿಗೆ ಮಾರ್ಗದರ್ಶನ ನೀಡುವುದು ಮತ್ತು ಅವರಲ್ಲಿ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿತ್ತು.







## ಜನವರಿ 20, 2026 – ಮೆಗಾ ವೆಂಡರ್ ಡೆವಲಪ್ಮೆಂಟ್ ಪ್ರೋಗ್ರಾಮ್ (ವಿಡಿಪಿ)

ಸ್ಥಳೀಯ ಮಟ್ಟದ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂ.ಎಸ್.ಎಂ.ಇ) ಹಾಗೂ ರೈಸಿಂಗ್ & ಆಕ್ಸಿಲರೇಟಿಂಗ್ ಎಂ.ಎಸ್.ಎಂ.ಇ ಪರ್ಫಾರ್ಮೆನ್ಸ್ (RAMP) ಯೋಜನೆಯನ್ನು ಸಂಯೋಜಿಸುವ ಮೂಲಕ ಬೆಳಗಾವಿಯ ಕೈಗಾರಿಕಾ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ಮೆಗಾ ವೆಂಡರ್ ಡೆವಲಪ್ಮೆಂಟ್ ಪ್ರೋಗ್ರಾಂ (ವಿ.ಡಿ.ಪಿ) ಅನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವು ಪೂರೈಕೆ ಸರಪಳಿಯ ಒಗ್ಗೂಡುವಿಕೆಯನ್ನು ಉತ್ತೇಜಿಸಲು ಮತ್ತು ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಗುರಿ ಹೊಂದಿತ್ತು. ಸ್ಥಳೀಯ ಉತ್ಪಾದಕರನ್ನು ಪ್ರಮುಖ ರಾಷ್ಟ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳೊಂದಿಗೆ (ಪಿ.ಎಸ್.ಯು) ಸಂಪರ್ಕಿಸುವ ಉನ್ನತ ಮಟ್ಟದ ಸಂಪರ್ಕ ಜಾಲ (ನೆಟ್ವರ್ಕಿಂಗ್) ಮತ್ತು ಖರೀದಿ ವೇದಿಕೆಯಾಗಿ ಇದು ಕಾರ್ಯನಿರ್ವಹಿಸಿತು.






# ಎಲ್ಯುಬಿ-ಕೆ ಬೆಳಗಾವಿ ಮಹಿಳಾ ಘಟಕವು ಆಯೋಜಿಸಿದ ಕಾರ್ಯಕ್ರಮಗಳು

## ಕುಂಬಾರಿಕೆ ಮತ್ತು ಉದ್ಯಮ ಶೀಲತೆ ಅಭಿವೃದ್ಧಿ ಕಾರ್ಯಕ್ರಮ

2026ರ ಜನವರಿ 28ರಂದು ಬೆಳಗಾವಿಯ ಎಲ್.ಯು.ಬಿ. ಮಹಿಳಾ ಘಟಕವು ಖಾನಾಪುರದ ಕೆ.ವಿ.ಐ.ಸಿ. ಸಹಯೋಗದೊಂದಿಗೆ ಬೆಳಗಾವಿಯ ಟಿ.ವಿ ಸೆಂಟರ್ನ ಬುಡಾ ಕಾಂಪ್ಲೆಕ್ಸ್‌ನಲ್ಲಿರುವ ಸಂಸ್ಕೃತಿ ಮಹಿಳಾ ಮಂಡಳದಲ್ಲಿ ಕುಂಬಾರಿಕೆ ಮತ್ತು ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಿತ್ತು.



## ಅಗ್ನಿ ದುರಂತ ಜಾಗೃತಿ ಕಾರ್ಯಕ್ರಮ

2026ರ ಫೆಬ್ರವರಿ 7ರಂದು ಲಘು ಉದ್ಯೋಗ ಭಾರತಿ ಬೆಳಗಾವಿ ಮಹಿಳಾ ಘಟಕವು ಖಾನಾಪುರ ರಸ್ತೆಯ ಉದ್ಯಂಬಾಗ್‌ನ ಬಿ.ಡಿ.ಪಿ.ಸಿ.ಯಲ್ಲಿ ಅಗ್ನಿ ದುರಂತದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಿತ್ತು.



# ಎಲ್.ಯು.ಬಿ-ಕೆ ಬೆಂಗಳೂರು ದಕ್ಷಿಣ ಮಹಿಳಾ ಘಟಕವು ಆಯೋಜಿಸಿದ ಕಾರ್ಯಕ್ರಮಗಳು

## ಕುಸುರಿ ಮನೆ - ಮಹಿಳಾ ಉದ್ಯಮಿಗಳಿಗಾಗಿ ಎಲ್.ಯು.ಬಿ-ಕೆ ಉಪಕ್ರಮ



ಮಹಿಳಾ ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಮೀಸಲಾದ ವೇದಿಕೆಯನ್ನು ಒದಗಿಸುವ ಮೂಲಕ ಅವರನ್ನು ಸಬಲೀಕರಣಗೊಳಿಸುವ ದೃಷ್ಟಿಕೋನದೊಂದಿಗೆ, ಎಲ್.ಯು.ಬಿ-ಕೆ ಬೆಂಗಳೂರು ದಕ್ಷಿಣ ಮಹಿಳಾ ತಂಡದ ವತಿಯಿಂದ 'ಕುಸುರಿ ಮನೆ' ಉಪಕ್ರಮವನ್ನು ಸ್ಥಾಪಿಸಲಾಯಿತು. ನಿಯಮಿತವಾದಮೇಳಗಳು ಮತ್ತು ವಸ್ತುಪ್ರದರ್ಶನಗಳ ಮೂಲಕ ಈ ಉಪಕ್ರಮವು ಅರ್ಥಪೂರ್ಣ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುತ್ತಿದೆ. ಈ ಮೂಲಕ ಮಹಿಳಾ ನೇತೃತ್ವದ ಉದ್ದಿಮೆಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತಿದೆ.



ಕೇವಲ ಒಂದು ಘಟಕದಿಂದ ಪ್ರಾರಂಭವಾದ 'ಕುಸುರಿ ಮನೆ'ಯು ಈಗ ಎರಡು ಯಶಸ್ವಿ ಘಟಕಗಳಾಗಿ ವಿಸ್ತರಣೆಗೊಂಡಿದ್ದು, ಅದರ ವಹಿವಾಟು ಆರಂಭಿಕ ನಿರೀಕ್ಷೆಗಳನ್ನೂ ಮೀರಿ ಬೆಳೆದಿದೆ. ಮಹಿಳಾ ಉದ್ಯಮಶೀಲತೆ, ಸ್ವಾವಲಂಬನೆ ಮತ್ತು ಸುಸ್ಥಿರ ವ್ಯಾಪಾರ ಬೆಳವಣಿಗೆಯನ್ನು ಉತ್ತೇಜಿಸುವ ಎಲ್.ಯು.ಬಿ-ಕೆ ಬದ್ಧತೆಯ ಯಶಸ್ವಿ ಮಾದರಿಯಾಗಿ 'ಕುಸುರಿ ಮನೆ' ಬೆಳೆದಿದೆ.





## ಲಘು ಉದ್ಯೋಗ ಭಾರತಿ– ಕರ್ನಾಟಕದ ಪದಾಧಿಕಾರಿಗಳು

| | | |
|---|---|---|
| ಶ್ರೀ ಕೆ. ನಾರಾಯಣ ಪ್ರಸನ್ನ, ಅಧ್ಯಕ್ಷರು | 9845508278 | president@lubkarnataka.org |
| ಶ್ರೀ ಕೆ.ಎಂ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ | 9845013077 | generalsecretary@lubkarnataka.org |
| ಶ್ರೀ ಸಿ.ವಿ. ಲಕ್ಷ್ಮೀಶ, ಖಜಾಂಚಿ | 9845390684 | treasurer@lubkarnataka.org |

**ಘಟಕಗಳ ಸಂಖ್ಯೆ** : 20 ಘಟಕಗಳು: ಬೆಂಗಳೂರು, ಬೆಂಗಳೂರು ಉತ್ತರ, ಅಬ್ಬಿಗೆರೆ, ಮೈಸೂರು, ಬೆಳಗಾವಿ, ಸಂಕೇಶ್ವರ, ಹುಬ್ಬಳ್ಳಿ, ರಾಮನಗರ, ಹಾಸನ, ಹೊಸಪೇಟೆ, ದಕ್ಷಿಣ ಕನ್ನಡ, ಪುತ್ತೂರು, ಶಿವಮೊಗ್ಗ, ದಾವಣಗೆರೆ, ತುಮಕೂರು ಮತ್ತು ಬೀದರ್.

**ಮಹಿಳಾ ಘಟಕಗಳು** : ಬೆಂಗಳೂರು ಉತ್ತರ, ಬೆಳಗಾವಿ, ಹುಬ್ಬಳ್ಳಿ, ಬೆಂಗಳೂರು ದಕ್ಷಿಣ

**ಪ್ರಸ್ತಾವಿತ ಘಟಕಗಳು** : ಬಾಗಲಕೋಟೆ, ಚಿಕ್ಕಮಗಳೂರು, ವಿಜಯಪುರ, ಕಲಬುರಗಿ, ಕೋಲಾರ

**ಅಸ್ತಿತ್ವ** : 29 ಜಿಲ್ಲೆಗಳು (31 ಜಿಲ್ಲೆಗಳ ಪೈಕಿ)

**ಸದಸ್ಯತ್ವ** : ಕರ್ನಾಟಕದಾದ್ಯಂತ 2500+

**ಮಹಿಳಾ ಉದ್ಯಮಿಗಳ ಘಟಕ ಸದಸ್ಯತ್ವ** : 550+

# ಲಘು ಉದ್ಯೋಗ ಭಾರತಿ – ಕರ್ನಾಟಕ
## LAGHU UDYOG BHARATI - KARNATAKA

ನಂ. 614, 3ನೇ ಮಹಡಿ, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಕಿತ್ತೂರು ರಾಣಿ ಚೆನ್ನಮ್ಮ ವೃತ್ತ, ದೇವೇಗೌಡ ಪೆಟ್ರೋಲ್ ಬಂಕ್ ಹಿಂಭಾಗ, ಬೆಂಗಳೂರು – 560 085
ದೂರವಾಣಿ : +91 80 2679 1234 । ಮೊಬೈಲ್: +91 99868 84720

ಇಮೇಲ್ : **updates@lubkarnataka.org / info@lubkarnataka.org**

ವೆಬ್‌ಸೈಟ್ : **www.lubkarnataka.org**